**7) ಶ್ರೀ. ಪ್ರದೀಪ್ ಪಟೇಲ್, ವಾರ್ಡ್ ಸಮಿತಿಯ ಸದಸ್ಯರು.** ರವರು ಮಾತನಾಡಿ ಹಳೆ ಹೆಣ್ಣೂರು ಮತ್ತು ಚಿಕ್ಕಣ್ಣ ಬಡಾವಣೆಯ ಶಾರದ ಶಾಲೆಯ ರಸ್ತೆಯಲ್ಲಿ ಹೊಸದಾಗಿ ಸ್ಯಾನಿಟರಿ ಲೈನ್ ಅನ್ನು ಅಳವಡಿಸಿ ಹಾಗೂ ರಸ್ತೆ 19ನೇ ಮುಖ್ಯರಸ್ತೆಯಲ್ಲಿ ಉಬ್ಬುಗಳನ್ನು ನಿರ್ಮಿಸಲು ಮತ್ತು ಫುಟ್‌ಪಾತ್ ಮೇಲೆ ಡೆಲ್ಲಿ ಬೆಂಚಸ್‌ಗಳನ್ನು ಅಳವಡಿಸಲು ಕೋರಿದರು.
**(ಕ್ರಮ:- ಬಿ.ಬಿ.ಎಂ.ಪಿ ಇಂಜಿನಿಯರಿಂಗ್ ಇಲಾಖೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ ವತಿಯಿಂದ ಕ್ರಮ ವಹಿಸುವುದು )**

**8) ಶ್ರೀ.ದೇವಾನಂದ ರಾವ್ ಟೆಲಿಕಾಂ ಲೇಔಟ್ ಅಸೋಸಿಯೇಷನ್ ಸದಸ್ಯರು,** ರವರು ಮಾತನಾಡಿ ಬಡಾವಣೆಯ ಪ್ರಾರಂಭದ 11ನೇ ಮತ್ತು 9ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಿಗೆ ಹೊಸದಾಗಿ ಡಾಂಬರೀಕರಣ ಮಾಡಿ ನೂತನವಾಗಿ ನಿರ್ಮಿಸಿರುವ ಉದ್ಯಾನವನಗಳು, ಟೆಲಿಕಾಂ ಬಡಾವಣೆಯ ಸಂಪೂರ್ಣ ಸ್ವರೂಪವನ್ನು ಬದಲಾವಣೆ ಮಾಡಿ ಬಡಾವಣೆಯನ್ನು ಅಭಿವೃದ್ಧಿಪಡಿಸಿರುವುದಕ್ಕೆ ಸ್ಥಳೀಯ ಪಾಲಿಕೆ ಸದಸ್ಯರಿಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದರು. ನಂತರ ಟೆಲಿಕಾಂ ಬಡಾವಣೆಯ ಬಾಕಿ ಇರುವ ಚರಂಡಿ ಕಾಮಗಾರಿ, ರಸ್ತೆ ಡಾಂಬರೀಕರಣ, ಬೀದಿ ದೀಪಗಳ ನಿರ್ವಹಣೆ ಮತ್ತು ಪೌರ ಕಾರ್ಮಿಕರಿಂದ ಸ್ವಚ್ಛತಾ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕೋರಿದರು.
**(ಕ್ರಮ:- ಬಿ.ಬಿ.ಎಂ.ಪಿ ಇಂಜಿನಿಯರಿಂಗ್ ಇಲಾಖೆ ಮತ್ತು ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗ ಮತ್ತು ಆರೋಗ್ಯ ಇಲಾಖೆ ವತಿಯಿಂದ ಕ್ರಮ ವಹಿಸುವುದು )**

**9) ಶ್ರೀ.ರಾಜೇಂದ್ರನ್ ಪ್ರಕಾಶ್ , 3ನೇ ಬ್ಲಾಕ್, ಅಸೋಸಿಯೇಷನ್ ಸದಸ್ಯರು,** ರವರು ಮಾತನಾಡಿ 8ನೇ ಅಡ್ಡರಸ್ತೆಯ ಬಿ.ಎಸ್.ಎನ್.ಎಲ್ ಕಛೇರಿ ಮುಂಭಾಗದ ರಸ್ತೆ ಪಕ್ಕದಲ್ಲಿ ಹಾಳು ಬಿದ್ದಿರುವ ವಾಹನಗಳನ್ನು ತೆರವುಗೊಳಿಸಲು, ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು.
**(ಕ್ರಮ:- ಬಿ.ಬಿ.ಎಂ.ಪಿ ಇಂಜಿನಿಯರಿಂಗ್ ಇಲಾಖೆ ಮತ್ತು ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗ ಮತ್ತು ಸಂಚಾರ ಪೋಲೀಸ್ ಇಲಾಖೆ ವತಿಯಿಂದ ಕ್ರಮ ವಹಿಸುವುದು )**

ಅದರಂತೆ **ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿಯವರು** ಮೇಲೆ ತಿಳಿಸಿರುವ ಎಲ್ಲಾ ಅಂಶಗಳಿಗೆ ತ್ವರಿತವಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿದರು

ಈ ಮೇಲೆ ತಿಳಿಸಿರುವ ಸದಸ್ಯರುಗಳ ಎಲ್ಲಾ ಕೆಲಸಗಳನ್ನು ಕೂಲಂಕುಶವಾಗಿ ಚರ್ಚಿಸಿ ಸಾರ್ವಜನಿಕರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು ಹಾಗೂ ಕುಂದು ಕೊರತೆಗಳನ್ನು ಶೀಘ್ರವಾಗಿ ಪರಿಹರಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದೆಂದು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಶಂಕರಪ್ಪ
ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿ
ವಾರ್ಡ್ ಸಮಿತಿ ಸದಸ್ಯರು

ಅಧ್ಯಕ್ಷರು
(ಪಿ.ಆನಂದ (ನಂದ)
ಬಿ.ಬಿ.ಎಂ.ಪಿ ಸದಸ್ಯರು
ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಲೇಔಟ್

Scanned by CamScanner